ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗುತ್ತದೆ.

## ಇದಕ್ಕೊಂದು ಇತಿಹಾಸವೂ ಇದೆ!

ಗ್ರೀಕ್ ಭಾಷೆಯಲ್ಲಿ 'ಸ್ಕಿಝೋ' ಎಂದರೆ 'ಛಿದ್ರ ಹಾಗೂ 'ಫ್ರೆನ್' ಎಂದರೆ ಮನಸ್ಸು ಎಂದರ್ಥ. ಸಾಮಾನ್ಯವಾಗಿ ಬಿಂಬಿಸುವಂತೆ ಇದು ಬಹು ವ್ಯಕ್ತಿತ್ವ (Multiple Personality Disorder) ರೋಗವಲ್ಲ. ಸ್ಕಿಝೋಫ್ರೇನಿಯಕ್ಕೆ, ತನ್ನದೇ ಆದ ರೋಗಲಕ್ಷಣಗಳಿವೆ.

1911ರಲ್ಲಿ, ಸ್ವಿಟ್ಜರ್‌ಲೆಂಡ್‌ನ ಮನೋರೋಗ ತಜ್ಞ ಯೂಜಿನ್ ಬ್ಲೂಲರ್ ' ಸ್ಕಿಝೋಫ್ರೇನಿಯ' ಎಂಬ ಪದವನ್ನು ಮೊದಲ ಬಾರಿಗೆ ಬಳಸಿದರು. 1887ರಲ್ಲಿಯೇ ಎಮಿಲ್ ಕ್ರೆಪಲೀನ್ ಎಂಬ ನರರೋಗ ತಜ್ಞ ಈ ಕಾಯಿಲೆಯ ಸ್ವರೂಪದ ಬಗ್ಗೆ ವಿಸ್ತೃತವಾಗಿ ತಿಳಿಸಿದ್ದ.

ಇತ್ತೀಚೆಗೆ ನಿಮ್ಹಾನ್ಸ್ ನಡೆಸಿದ 'ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆ'ಯ ಪ್ರಕಾರ ಭಾರತದಲ್ಲಿ, ಹೆಚ್ಚು ಕಡಿಮೆ ನೂರಕ್ಕೆ ಒಬ್ಬರಂತೆ (ಶೇ.1.4) ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅದರಲ್ಲಿ ಸುಮಾರು ಮುಕ್ಕಾಲು ಪಾಲು ರೋಗಿಗಳಿಗೆ, ಈ ಕಾಯಿಲೆಯ ಬಗ್ಗೆ ಮಾಹಿತಿಯ ಕೊರತೆ ಇರುತ್ತದೆ ಮತ್ತು ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆಯುವುದಿಲ್ಲ.

## ಕಾರಣಗಳೇನು?

ಅನುವಂಶೀಯತೆ, ಪ್ರಸವದ ಸಮಯದಲ್ಲಿ ಉಂಟಾಗುವ ತೊಂದರೆಗಳು, ನರಮಂಡಲದ ನಂಜು, ಮಾದಕ ವಸ್ತುಗಳ ಉಪಯೋಗ (ಗಾಂಜಾ, ಕೊಕೇನ್, ಮದ್ಯಪಾನ ಇತ್ಯಾದಿ) ಹಾಗೂ ಜೆನೆಟಿಕ್ ಕಾರಣಗಳಿಂದ ಸ್ಕಿಝೋಫ್ರೇನಿಯ ಉಂಟಾಗಬಹುದೆಂದು ಸಂಶೋಧನೆಗಳು ತಿಳಿಸಿವೆ. ಈ ಕಾಯಿಲೆಯಲ್ಲಿ, ಮೆದುಳಿನಲ್ಲಿ 'ಡೊಪಮಿನ್' ಎಂಬ ನರವಾಹಕದ ಪ್ರಮಾಣ ಹೆಚ್ಚಾಗುತ್ತದೆ. ಈ ನರವಾಹಕದ ಹೆಚ್ಚಿದ ಪ್ರಮಾಣವೇ ರೋಗ ಲಕ್ಷಣಗಳಿಗೆ ಕಾರಣ.

## ರೋಗಲಕ್ಷಣಗಳು ಹೀಗಿರುತ್ತವೆ!

ಸ್ಕಿಝೋಫ್ರೇನಿಯವು ವ್ಯಕ್ತಿಯ ಗ್ರಹಿಕೆ, ಚಿಂತನೆ, ಮಾತು ಹಾಗೂ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ. ವ್ಯಕ್ತಿಗೆ ಅತಿಮಾನುಷ ಅನುಭವಗಳಾಗುತ್ತವೆ. ಅಶರೀರ ಧ್ವನಿ ಹಾಗೂ ಶಬ್ದಗಳು ಕೇಳಿಸುತ್ತವೆ. ಆ ಧ್ವನಿಗಳು ವಾಸ್ತವಕ್ಕೆ ಎಷ್ಟು ಹತ್ತಿರವಾಗಿರುತ್ತವೆಂದರೆ ನಿಜವಾಗಿಯೂ ಯಾರೋ ಮಾತನಾಡಿಸುತ್ತಿದ್ದಾರೆ ಎಂದು ವ್ಯಕ್ತಿಯು ನಂಬಿಬಿಡುತ್ತಾನೆ. ಆ ಧ್ವನಿಗಳು ತಮ್ಮೊಳಗೆ ವ್ಯಕ್ತಿಯ ಬಗ್ಗೆ ಚರ್ಚಿಸುವುದು, ಆತನನ್ನು ಅವಾಚ್ಯವಾಗಿ ನಿಂದಿಸುವುದು, ಕುಚೋದ್ಯ ಮಾಡುವುದು ಸಹ ಕೇಳಿಸಬಹುದು (hallucinations). ಈ ಅಶರೀರ ಧ್ವನಿಗಳ ಕೇಳಿಸುವಿಕೆ ಹೆಚ್ಚಾದಾಗ, ವ್ಯಕ್ತಿಯು ಅವುಗಳೊಂದಿಗೆ ವಾದಕ್ಕಿಳಿಯಬಹುದು. ಕೊನೆಗೆ ಸೋತು ಧ್ವನಿಗಳು ಹೇಳಿದಂತೆ ನಡೆದುಕೊಳ್ಳಬಹುದು.

ಭ್ರಮೆ (Delusion), ಸಂಶಯಗಳು ಸ್ಕಿಝೋಫ್ರೇನಿಯ ರೋಗದ ಮುಖ್ಯ ಲಕ್ಷಣಗಳು.



ರೋಗಿಯು ಯಾವುದೇ ಪುರಾವೆ ಇಲ್ಲದಿದ್ದರೂ ತನಗೆ ಯಾರಿಂದಲೋ ಜೀವ ಭಯವಿದೆ ಎಂದು ತಿಳಿಯಬಹುದು. ತಿನ್ನುವ ಅನ್ನದಲ್ಲಿ ವಿಷ ಹಾಕಿರಬಹುದೆಂದು ಅನುಮಾನ ವ್ಯಕ್ತಪಡಿಸಿ ದಿನಗಳಗಟ್ಟಲೆ ಊಟ ಮಾಡದೇ ಇರಬಹುದು. ತನ್ನ ಸಂಗಾತಿಯ ಶೀಲದ ಬಗ್ಗೆ ಸಂಶಯಪಡಬಹುದು. ಕೆಲವೊಮ್ಮೆ ಇಂತಹ ಸಂಶಯ ವಿಕೋಪಕ್ಕೆ ತಿರುಗಿ ಕೊಲೆಯಲ್ಲಿ ಕೊನೆಯಾದ ನಿದರ್ಶನಗಳಿವೆ. ವ್ಯಕ್ತಿಗೆ ಆತನ ಭ್ರಮೆಯ ವಿರುದ್ಧ ಎಷ್ಟೇ ಪುರಾವೆಗಳನ್ನು ನೀಡಿದರೂ ಒಪ್ಪಿಕೊಳ್ಳುವುದಿಲ್ಲ.

ಈ ಕಾಯಿಲೆಯಲ್ಲಿ, ರೋಗಿಯು ತನ್ನನ್ನು ಬಾಹ್ಯಶಕ್ತಿಗಳು ನಿಯಂತ್ರಿಸುತ್ತಿದ್ದು, ತನ್ನೆಲ್ಲ ಮಾತು, ಚಟುವಟಿಕೆಗಳಿಗೆ ಬಾಹ್ಯಶಕ್ತಿಯೇ ಕಾರಣ ಎಂದು ಭಾವಿಸುತ್ತಾನೆ. ವ್ಯಕ್ತಿಯ ಯೋಚನಾಲಹರಿಯಲ್ಲಿ ಅಡೆತಡೆಗಳುಂಟಾಗಿ, ಮಾತು ಅರ್ಥಹೀನವಾಗುತ್ತದೆ ಅಥವಾ ಆತ ಸಂಪೂರ್ಣ ಸ್ತಬ್ಧನಾಗಬಹುದು. ಇಂತಹ ವಿಚಿತ್ರ ಅನುಭವಗಳು, ನಿಂದಿಸುತ್ತಿರುವ ಅಗೋಚರ ಮನುಷ್ಯರ ಧ್ವನಿಗಳು ಹಾಗೂ ಕಲ್ಪಿತ ಪ್ರಾಣಭಯಗಳಿಂದ, ಕೆಲವೊಮ್ಮೆ ವ್ಯಕ್ತಿಯು ಆಕ್ರಮಣಶೀಲ ಹಾಗೂ ಹಿಂಸಾತ್ಮಕನಾಗಬಹುದು. ಕೆಲವೊಮ್ಮೆ ಆತ್ಮಹತ್ಯೆಗೂ ಪ್ರಯತ್ನಿಸಬಹುದು.



ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆ 2016 ಭಾರತದಲ್ಲಿ **1.4%** ಜನ ಸ್ಕಿಝೋಫ್ರೇನಿಯದಿಂದ ಬಳಲುತ್ತಿದ್ದಾರೆ.



**75%** ಜನರು ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆಯುವುದಿಲ್ಲ.



ಗಂಡಸರು ಹಾಗೂ ನಗರವಾಸಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.



ಮದ್ಯಪಾನ, ತಂಬಾಕು, ಗಾಂಜಾ, ಕೊಕೇನ್‌ನಂತಹ ಮಾದಕ ಪದಾರ್ಥಗಳಿಂದ ಈ ಕಾಯಿಲೆ ಬರುವ ಸಾಧ್ಯತೆ ಹೆಚ್ಚು.

## ಚಿಕಿತ್ಸೆಯ ಊರುಗೋಲು

1952ರಲ್ಲಿ ಕ್ಲೋರ್‌ಪ್ರೊಮಾಜಿನ್ ಎಂಬ ಔಷಧಿಯ ಸಂಶೋಧನೆಗೂ ಮೊದಲು ಸ್ಕಿಝೋಫ್ರೇನಿಯಾಕ್ಕೆ ನಿರ್ದಿಷ್ಟವಾದ ಚಿಕಿತ್ಸೆಯಿರಲಿಲ್ಲ. ಹೀಗಾಗಿ ರೋಗಿಗಳು ತಮ್ಮ ಉಳಿದ ಜೀವನವನ್ನು ಮಾನಸಿಕ ರೋಗಿಗಳ ಆಶ್ರಯತಾಣಗಳಲ್ಲಿ, ಕೆಲವು ಹಿಂಸಾತ್ಮಕವಾದ ಚಿಕಿತ್ಸಾ ಪದ್ಧತಿಗಳಿಗೊಳಗಾಗುತ್ತ ಕಳೆಯಬೇಕಾಗಿತ್ತು.

1952ರ ಈಚೆಗೆ ಅನೇಕ, ಮನೋರೋಗಗಳಿಗೆ ಸಂಬಂಧಿಸಿದ ಔಷಧಿಗಳ ಆವಿಷ್ಕಾರವಾಗಿದ್ದು, ಇದರಿಂದ ಸ್ಕಿಝೋಫ್ರೇನಿಯದ ಚಿಕಿತ್ಸೆ ಪರಿಣಾಮಕಾರಿ ಹಾಗೂ ತೃಪ್ತಿದಾಯಕವಾಗಿದೆ. ಇತ್ತೀಚೆಗೆ ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ನೀಡುವಂತಹ ಚುಚ್ಚುಮದ್ದುಗಳ (depot injections) ಆವಿಷ್ಕಾರವಾದಾಗಿನಿಂದ, ದಿನನಿತ್ಯ ಮಾತ್ರೆಗಳ ಸೇವನೆಯ ತೊಂದರೆ ತಪ್ಪುತ್ತಿದೆ.

ಅರಿವಳಿಕೆಯೊಂದಿಗೆ ನೀಡುವ ವಿದ್ಯುತ್ ಕಂಪನ ಚಿಕಿತ್ಸೆಯು (Electro convulsive therapy) ಉಲ್ಬಣಗೊಂಡಿರುವ ಹಾಗೂ ದೀರ್ಘಾವಧಿಯ ರೋಗ ನಿಯಂತ್ರಣಕ್ಕೆ ನೆರವಾಗುತ್ತದೆ. ಈ ಕಾಯಿಲೆಯು ಮಧುಮೇಹ, ರಕ್ತದೊತ್ತಡದಂತೆ ದೀರ್ಘಕಾಲದ ಕಾಯಿಲೆಯಾಗಿದ್ದು ಸಂಪೂರ್ಣವಾಗಿ ಗುಣಪಡಿಸಲಾಗದೇ ಇರಬಹುದು. ರೋಗ ನಿರ್ಧಾರವಾದ ತಕ್ಷಣ ವೈದ್ಯರ ಸಲಹೆಯ ಮೇರೆಗೆ, ನಿಯಮಿತ ಹಾಗೂ ಕಟ್ಟುನಿಟ್ಟಾದ ಔಷಧೋಪಚಾರ, ಕುಟುಂಬದ ಆರೈಕೆ, ಚಟುವಟಿಕೆಯುಕ್ತ ಜೀವನಪದ್ಧತಿ, ಸಾಮಾಜಿಕ ಹಾಗೂ ಔದ್ಯೋಗಿಕ ಪುನರ್ವಸತಿ ಒದಗಿಸುವದರಿಂದ ರೋಗವನ್ನು ನಿಯಂತ್ರಣದಲ್ಲಿಟ್ಟು, ವ್ಯಕ್ತಿಯು ಬಹುತೇಕ ಇತರರಂತೆ ಸಾಮಾನ್ಯ ಜೀವನ ನಡೆಸಬಹುದಾಗಿದೆ.

ಇತಿಹಾಸದಲ್ಲಿ ಅನೇಕ ಕಲಾವಿದರು, ವಿಜ್ಞಾನಿಗಳು ಹಾಗೂ ವಿದ್ವಾಂಸರು ಈ ರೋಗದಿಂದ ಬಳಲುತ್ತಿದ್ದರೂ, ಸಾಧನೆಯ ಉತ್ತುಂಗಕ್ಕೇರಿದ್ದರು. ಮಹಾನ್ ಗಣಿತ ಶಾಸ್ತ್ರಜ್ಞ, ನೊಬೆಲ್ ಪ್ರಶಸ್ತಿ ವಿಜೇತ ಜಾನ್ ನ್ಯಾಶ್ ಇದಕ್ಕೆ ಜ್ವಲಂತ ಉದಾಹರಣೆ. ಇಂದಿಗೂ ಸಹ ಅನೇಕರು ಈ ಕಾಯಿಲೆಯನ್ನು ಹತೋಟಿಯಲ್ಲಿಟ್ಟುಕೊಂಡು, ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿದ್ದು ಸಫಲ ಸಾಂಸಾರಿಕ, ಸಾಮಾಜಿಕ, ಹಾಗೂ ವೃತ್ತಿ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಲೇಖಕರು ಹುಬ್ಬಳ್ಳಿಯಲ್ಲಿ ಮನೋವೈದ್ಯರು.
ಸಂಪರ್ಕ: 7760072812